O.S. No.77/2014 P.W. 1 Dated :09-10-2023.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಶ್ರೀ. ಬಿ ಡಿ ಎಸ್. ವಕೀಲರಿಂದ 1 ಮತ್ತು 2 ನೇ ಪ್ರತಿವಾದಿಯರ ಪರವಾಗಿಃ -

ನಂಜಮ್ಮನವರಿಗೆ 3 ಜನ ಮಕ್ಕಳು ಎಂದರೆ ಸರಿ . ಸಿದ್ದಲಿಂಗಮ್ಮನವರಿಗೆ 4 ಜನ ಮಕ್ಕಳು ಎಂದರೆ ಸರಿಯಲ್ಲ, 6 ಜನ ಮಕ್ಕಳು ಎಂದು ನುಡಿಯುತ್ತಾರೆ. ಅವರೆಂದರೆ ಲಲಿತಮ್ಮ , ಅಂಬಿಕ , ಧ್ರಾಕ್ಷಾಯಿಣಿ , ಮಲ್ಲೇಶಪ್ಪ , ಈಶ್ವರಪ್ಪ , ವಿಜಯ್ ಕುಮಾರ್. ಸಿದ್ದಲಿಂಗಮ್ಮನವರ ವಾರಸುದಾರರನ್ನು ದಾವಾದಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ. ನಿಪಿ-7 ರಲ್ಲಿ ಸಿದ್ದಲಿಂಗಮ್ಮನ ವಾರಸುದಾರರನ್ನು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಅವರು ನಮಗೆ ಹಿಸ್ಸೆ ಬೇಡ ಎಂದು ತಿಳಿಸಿದ ಮೇರೆಗೆ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸಿದ್ದಲಿಂಗಮ್ಮನ ವಾರಸುದಾರರು ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿರುವುದಿಲ್ಲ. ದಾವಾ ಐಟಂ ನಂ-4 ರ ಸ.ನಂ.32 ರಲ್ಲಿ ಒಟ್ಟು 2 ಎಕರೆ 39 ಗುಂಟೆಗೆ ಸಂಬಂಧಿಸಿದಂತೆ ದಾವೆ ಹೂಡಿರುತ್ತೇವೆ ಎಂದರೆ ಸರಿ. ಐಟಂ ನಂ 4ರ ಲ್ಲಿ ಇಪ್ಪತ್ತೊಂಭತ್ತುಮುಕ್ಕಾಲು ಗುಂಟೆ ರಾಜೇಗೌಡ ಬಿನ್ ತಿಮ್ಮರಾಯಿಗೌಡರ ಹೆಸರಿನಲ್ಲಿದೆ ಎಂದರೆ ಅದು ಮಾರಾಟವಾಗಿರುತ್ತದೆ ಎಂದು ನುಡಿಯುತ್ತಾರೆ. ರಾಜೇಗೌಡ ಬಿನ್ಃ ತಿಮ್ಮರಾಯಿಗೌಡರನ್ನು ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ. 3 ನೇ ಪ್ರತಿವಾದಿ ಸದರಿ ಸ್ವತ್ತನ್ನು ಮಾರಾಟ ಮಾಡಿದರು. ಸದರಿ ಸ್ವತ್ತು ಪಿತ್ರಾರ್ಜಿತ ಸ್ವತ್ತಾಗಿರುತ್ತದೆ. ಐಟಂ ನಂ 5 ರ ಸ.ನಂ. 37 ಕ್ಕೆ ಸಂಬಂಧಿಸಿದ ನಿಪಿ-5 ಪರ್ವತಪ್ಪ ಬಿನ್ ಸಿದ್ದಲಿಂಗೇಗೌಡ ಎಂಬುವವರ ಹೆಸರಿನಲ್ಲಿ ಜಂಟಿ ಖಾತೆ ಇದೆ ಎಂದರೆ ಸಾಕ್ಷಿಯು ಷಣ್ಮುಖಪ್ಪ ಎಂದು ನಮೂದು ಮಾಡುವ ಬದಲು ಪರ್ವತಪ್ಪ ಎಂದು ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ದಾವೆಯನ್ನು ಪರ್ವತಪ್ಪ ಎಂದು ಪಹಣಿಯಲ್ಲಿ ತಪ್ಪಾಗಿ ನಮೂದಾಗಿರುತ್ತದೆ ಎಂದು ತಿಳಿಸಿರುವುದಿಲ್ಲ. ಪರ್ವತಪ್ಪ ಎಂಬುವವರನ್ನು ಪಕ್ಷಗಾರರನ್ನಾಗಿ ಮಾಡಬೇಕಾಗುತ್ತದೆ ಎಂಬ ಕಾರಣಕ್ಕೆ ಪಹಣಿಯಲ್ಲಿ ಹೆಸರು ತಪ್ಪಾಗಿ ನಮೂದಾಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ಸೋಮಶೇಖರ ಬಿನ್ ಸಿದ್ದಲಿಂಗೇಗೌಡ , ಮಹಲಿಂಗಪ್ಪ ಬಿನ್ ಸಿದ್ದಲಿಂಗೇಗೌಡ ಎಂದು ನಮೂದಾಗಿದ್ದು , ಅವರನ್ನು ಪಕ್ಷಗಾರರಾಗಿ ಮಾಡಿರುವುದಿಲ್ಲ. ವಾದಿ ಮತ್ತು 1, 3(ಎ), 3(ಬಿ) ಮತ್ತು 3(ಸಿ) ಇವರು ಬೇರೆ ಬೇರೆ ಮನೆಗಳಲ್ಲಿ ವಾಸವಾಗಿರುತ್ತಾರೆಂದರೆ ಸರಿ . ಅವರವರ ಕುಟುಂಬಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಕುಟುಂಬ

ಪಡಿತರ ಚೀಟಿಯನ್ನು ಹೊಂದಿರುತ್ತಾರೆ ಎಂದರೆ ಸರಿ. ಅವರುಗಳು ಪ್ರತ್ಯೇಕವಾಗಿ ವಾಸವಾಗಿರುವ ಮನೆಗಳನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ. 3(ಎ) ಪ್ರತಿವಾದಿಯ ಹೆಸರಿನಲ್ಲಿ ಬೆಳ್ಳೂರು ಗ್ರಾಮದ ಸ.ನಂ. 58/1, 58/2, 58/3 , 58/4 ರಲ್ಲಿ ಪಿತ್ರಾರ್ಜಿತವಾದ ಸ್ವತ್ತುಗಳಿವೆ ಎಂದರೆ ಸರಿ . ಅದಕ್ಕೆ ಸಂಬಂಧಿಸಿದ ಪಹಣಿಗಳನ್ನು ಸಾಕ್ಷಿಗೆ ತೋರಿಸಲಾಗಿ , ಒಪ್ಪಿಕೊಂಡ ಮೇರೆಗೆ ನಿ.ಡಿ.-2 ರಿಂದ 5 ಎಂದು ಗುರುತಿಸಲಾಯಿತು. ಈ ಮೇಲ್ಕಂಡ ಸ್ವತ್ತುಗಳನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ. ದಿಃ26-04-1970 ರಲ್ಲಿ ವಾದಿ ಹಾಗೂ ಪ್ರತಿವಾದಿಗಳ ನಡುವೆ ಪಿತ್ರಾರ್ಜಿತ ಸ್ವತ್ತುಗಳು ವಿಭಾಗವಾಗಿರುತ್ತವೆ ಎಂದರೆ ಸರಿಯಲ್ಲ. ನಿಮ್ಮ ಹಿಸ್ಸಾ ಜಮೀನುಗಳನ್ನು ನೀವು ಸ್ವಾಧೀನಾನುಭವ ಹೊಂದಿ ಅನುಭವಿಸಿಕೊಂಡು ಬರುತ್ತಿದ್ದೀರಾ ಎಂದರೆ ಸಾಕ್ಷಿಯು ನನ್ನ ಕುಟುಂಬದಲ್ಲಿ ಎಂದಿಗೂ ಸಹ ವಿಭಾಗವಾಗಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ 4 ರ ಪೈಕಿ 1 ಎಕರೆ ಹತ್ತೊಂಭತ್ತುವರೆ ಗುಂಟೆ ಜಮೀನು 1 ನೇ ಪ್ರತಿವಾದಿಗೆ ಭೂ ನ್ಯಾಯಮಂಡಳಿಯಿಂದ ಮಂಜೂರಾದ ಜಮೀನು ಎಂದರೆ ಸರಿಯಲ್ಲ. ಪ್ರತಿವಾದಿಗೆ ಮಂಜೂರಾದ ರೀತಿಯಲ್ಲಿ ನಮ್ಮ ತಂದೆಗೂ ಸಹ ಭೂ ನ್ಯಾಯಮಂಡಳಿಯಿಂದ ಮಂಜೂರಾದ ಜಮೀನಾಗಿದ್ದು , ಅದನ್ನು ನನ್ನ ತಂದೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವೆಯಲ್ಲಿ ಅವಶ್ಯಕ ಪಕ್ಷಗಾರರನ್ನು ಸೇರಿಸದ ಕಾರಣ ಹಾಗೂ ಒಟ್ಟು ಕುಟುಂಬದ ಎಲ್ಲಾ ಸ್ವತ್ತುಗಳನ್ನು ಸೇರಿಸದ ಕಾರಣ ದಾವೆ ಕಾನೂನು ರೀತಿ ನಿಲ್ಲತಕ್ಕದ್ದಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಹಿಸ್ಸಾ ಹಕ್ಕನ್ನು ಹೊಂದಲು ಅರ್ಹರಿರುವುದಿಲ್ಲ ಎಂದರೆ ಸರಿಯಲ್ಲ. ವಿಭಾಗದ ರೀತ್ಯಾ ನಮ್ಮಗಳ ಹೆಸರಿಗೆ ಖಾತೆಯಾಗಿರುವುದಿಲ್ಲ ಎಂಬ ಒಂದೇ ಕಾರಣಕ್ಕೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಎಂದಿಗೂ ಸಹ ನಮ್ಮ ಕುಟುಂಬದಲ್ಲಿ ಸ್ವತ್ತುಗಳು ವಿಭಾಗವಾಗಿರುವುದಿಲ್ಲ ಎಂದು ನುಡಿಯುತ್ತಾರೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಆಲೂರು.